ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 23-10-1970

*<u>ಮಹಾರಥಿಯಾಗುವ ಪುರುಷಾರ್ಥ</u>* (महारथी बनने का पुरुषार्थ)

ಆತ್ಮಿಕ ಡ್ರಿಲ್ ಬರುತ್ತದೆಯೇ, ಡ್ರಿಲ್ ನಲ್ಲಿ ಏನು ಮಾಡುವುದಿರುತ್ತಾರೆ? ಡ್ರಿಲ್ ಎಂದರೆ ಶರೀರವನ್ನು ಎಲ್ಲಿ ಬೇಕೋ ಅಲ್ಲಿ ತಿರುಗಿಸುವುದು ಮತ್ತು ಆತ್ಮಿಕ ಡ್ರಿಲ್ ಎಂದರೆ ಆತ್ಮನನ್ನು ಎಲ್ಲಿ, ಹೇಗೆ ಮತ್ತು ಯಾವಾಗ ಬೇಕೋ ಅಲ್ಲಿ ಸ್ಥಿರ ಮಾಡುವುದು ಎಂದರೆ ತಮ್ಮ ಸ್ಥಿತಿ ಹೇಗೆ ಬೇಕೋ ಹಾಗೆ ಮಾಡುವುದನ್ನು ಡ್ರಿಲ್ ಎಂದು ಕರೆಯುತ್ತಾರೆ. ಹೇಗೆ ಸೇನೆಯ ಮಾರ್ಷಲ್ ಅಥವಾ ಡ್ರಿಲ್ ಮಾಸ್ಟರ್ ಸಂಕೇತಗಳನ್ನು ಕೊಟ್ಟಂತೆ ಮಾಡುತ್ತಾರೆಯೋ ಅದೇ ರೀತಿ ಸ್ವಯಂ ಮಾಸ್ಟರ್ ಅಥವಾ ಮಾರ್ಷಲ್ ಆಗಿ ಎಲ್ಲಿ ತಮ್ಮನ್ನು ಸ್ಥಿತ ಮಾಡಿಕೊಳ್ಳಬೇಕೋ ಅಲ್ಲಿ ಮಾಡಬೇಕು. ಈ ರೀತಿ ತಮಗೆ ತಾವೇ ಡ್ರಿಲ್ ಮಾಸ್ಟರ್ ಆಗಿರುವಿರಾ? ಮಾಸ್ಟರ್ ಕೈಗಳನ್ನು ಕೆಳಗೆ ಮಾಡಿ ಎಂದಾಗ ವಿದ್ಯಾರ್ಥಿಗಳು ಮೇಲೆ ಮಾಡುವುದಲ್ಲ. ಮಾರ್ಷಲ್ ಬಲಕ್ಕೆ ಎಂದಾಗ ಸೇನೆ ಎಡಗಡೆಗೆ ಮಾಡುವುದಲ್ಲ. ಇಂತಹ ಸೈನಿಕರನ್ನು ಅಥವಾ ವಿದ್ಯಾರ್ಥಿಗಳನ್ನು ಏನು ಮಾಡಲಾಗುತ್ತದೆ? ಡಿಸ್ಮಿಸ್(ಬಹಿಷ್ಕರಣೆ). ಇಲ್ಲಿಯೂ ತಮ್ಮ ಅಧಿಕಾರದಿಂದ ಸ್ವಯಂ ಡಿಸ್ಮಿಸ್ ಆಗಿಯೇ ಆಗುತ್ತಾರೆ. ಒಂದು ಕ್ಷಣದಲ್ಲಿ ತಮ್ಮ ಸ್ಥಿತಿಯನ್ನು ಎಲ್ಲಿ ಬೇಕೋ ಅಲ್ಲಿ ಸ್ಥಿರಗೊಳಿಸುವ ಅಭ್ಯಾಸವಾಗಬೇಕು ಏಕೆಂದರೆ ಈಗ ಯುದ್ಧಸ್ಥಳದಲ್ಲಿರುವಿರಿ. ಯುದ್ಧಸ್ಥಳದಲ್ಲಿ ಸೇನೆ ಒಂದು ವೇಳೆ ಕ್ಷಣದಲ್ಲಿ ಆದೇಶವನ್ನು ಕಾರ್ಯದಲ್ಲಿ ತರದಿದ್ದರೆ ಅವರನ್ನು ಏನೆಂದು ಹೇಳಲಾಗುತ್ತದೆ? ಈ ಆತ್ಮಿಕ ಯುದ್ಧದಲ್ಲಿಯೂ ಸ್ಥಿತಿಯನ್ನು ಸ್ಥಿರಗೊಳಿಸಲು ಸಮಯ ತೆಗೆದುಕೊಂಡರೆ ಅಂತಹ ಸೈನಿಕರನ್ನು ಏನೆಂದು ಹೇಳುವುದು? ಇಂದು ಬಾಪ್ ದಾದಾ ಪುರುಷಾರ್ಥಿ, ಮಹಾರಥಿ ಮಕ್ಕಳನ್ನು ನೋಡುತ್ತಿದ್ದಾರೆ. ಯಾರು ತಮ್ಮನ್ನು ತಾವು ಮಹಾರಥಿ ಎಂದು ತಿಳಿಯುತ್ತೀರೋ ಅವರು ಕೈಎತ್ತಿ. (ಸ್ವಲ್ಪ ಜನ ಕೈಎತ್ತಿದರು). ಯಾರು ಮಹಾರಥಿಯಲ್ಲವೋ ಅವರು ತಮ್ಮನ್ನು ಏನೆಂದು ತಿಳಿದುಕೊಳ್ಳುತ್ತೀರಿ? ತಮ್ಮನ್ನು ಕುದುರೆ ಸವಾರರೆಂದು ತಿಳಿದುಕೊಳ್ಳುವವರು ಕೈಎತ್ತಿ. ಯಾರು ಮಹಾರಥಿಗಳಲ್ಲಿ ಕೈಎತ್ತಲಿಲ್ಲ ಅವರಿಗೆ ಬಾಪ್ ದಾದಾ ಒಂದು ಪ್ರಶ್ನೆಯನ್ನು ಕೇಳುತ್ತಿದ್ದಾರೆ. ತಮ್ಮನ್ನು ಬಾಪ್ ದಾದಾರ ವಾರಸುದಾರರೆಂದು ತಿಳಿಯುತ್ತೀರಾ? ಯಾರು ತಮ್ಮನ್ನು ಕುದುರೆ ಸವಾರ ಎಂದು ತಿಳಿಯುತ್ತೀರಿ ಅವರು ತಮ್ಮನ್ನು ವಾರಸುದಾರ ಎಂದು ತಿಳಿಯುತ್ತೀರಾ? ವಾರಸುದಾರನ ಪೂರ್ಣ ಅಧಿಕಾರವನ್ನು ತೆಗೆದುಕೊಳ್ಳಬೇಕೋ ಬೇಡವೋ? ಪೂರ್ಣ ಆಸ್ತಿಯನ್ನು ತೆಗೆದುಕೊಳ್ಳುವಾಗ ಕುದುರೆ ಸವಾರ ಏಕೆ? ಕುದುರೆ ಸವಾರರಾದರೆ ನಂಬರ್ ಎಲ್ಲಿಗೆ ಹೋಗುವುದು ಗೊತ್ತೇ? ಎರಡನೆಯ ಗ್ರೇಡ್ ನವರು ಎಲ್ಲಿ ಬರುವರು, ಇಷ್ಟು ಪಾಲನೆಯನ್ನು ಪಡೆದ ಮೇಲೆ ಎರಡನೆಯ ಗ್ರೇಡ್? ಒಂದು ವೇಳೆ ಬಹಳ ಸಮಯದಿಂದ ಎರಡನೆಯ ಗ್ರೇಡ್ ಪುರುಷಾರ್ಥವಿದ್ದರೆ ಆಸ್ತಿಯು ಸಹ ಬಹಳ ಸಮಯ ಎರಡನೆಯ ಗ್ರೇಡ್ ನದು ಸಿಗುವುದು. ಉಳಿದ ಸ್ವಲ್ಪ ಸಮಯ ಮೊದಲನೆಯ ಗ್ರೇಡ್ ನಲ್ಲಿ ಅನುಭವ ಮಾಡುವಿರಿ. ಸರ್ವಶಕ್ತಿವಂತ ತಂದೆಯ ಮಕ್ಕಳೆನಿಸಿಕೊಳ್ಳುವವರು ಮತ್ತು ವ್ಯಕ್ತ-ಅವ್ಯಕ್ತ ಪಾಲನೆ ಪಡೆಯುವವರು ಮತ್ತೆ ಎರಡನೆಯ ಗ್ರೇಡ್. ಈ ರೀತಿ ಹೇಳುವುದೂ ಸಹ ಶೋಭಿಸುವುದಿಲ್ಲ. ಇಲ್ಲವಾದರೆ ಇಂದಿನಿಂದ ತಮ್ಮನ್ನು ಸರ್ವಶಕ್ತಿವಂತನ ಮಕ್ಕಳೆಂದು ಹೇಳಿಕೊಳ್ಳಬೇಡಿ.

ಇಂತಹ ಪುರುಷಾರ್ಥಿಗಳನ್ನು ಬಾಪ್ ದಾದಾ ಮಕ್ಕಳು ಎಂದು ಕರೆಯದೇ ಏನೆಂದು ಕರೆಯುತ್ತಾರೆ ಗೊತ್ತೇ? ಮಕ್ಕಳಾಗಿಲ್ಲ ಇನ್ನೂ ಕಚ್ಚಾ (ಬಲಹೀನತೆ ಇದೆ) ಆಗಿದ್ದಾರೆ. ಇನ್ನೂವರೆಗೂ ಪುರುಷಾರ್ಥ ಮಾಡುವುದು ಮಕ್ಕಳ ಸ್ವಮಾನಕ್ಕೆ ಯೋಗ್ಯ ಎಂದು ಕಂಡುಬರುವುದಿಲ್ಲ. ಆದ್ದರಿಂದ ಬಾಪ್ ದಾದಾ ಆದರೂ, ಕಳೆದದ್ದು ಕಳೆದು ಹೋಯಿತು, ಈಗಿನಿಂದ ತಮ್ಮನ್ನು ಬದಲಿಸಿಕೊಳ್ಳಿ ಎಂದು ಹೇಳುತ್ತಾರೆ. ಮಹಾರಥಿಯಾಗಲು ಕೇವಲ ಎರಡು ಮಾತುಗಳನ್ನು ನೆನಪಿಡಿ. ಅವು ಯಾವವು? ಒಂದು ತಮ್ಮನ್ನು ಸದಾ ಜೊತೆಗಾರನ(ತಂದೆಯ) ಜೊತೆಗಿಟ್ಟುಕೊಳ್ಳಿ, ಜೊತೆಗಾರ ಮತ್ತು ಸಾರಥಿ ಅವರೇ ಮಹಾರಥಿ. ದುರ್ಬಲ ಪುರುಷಾರ್ಥಕ್ಕೆ ಎರಡು ಕಾರಣಗಳಿವೆ. ತಂದೆಯ ಸ್ನೇಹಿಯಾಗಿದ್ದೀರಿ. ಆದರೆ ತಂದೆಯನ್ನು ಜೊತೆಗಾರನನ್ನಾಗಿ ಮಾಡಿಕೊಂಡಿಲ್ಲ. ಬಾಪ್ ದಾದಾರನ್ನು ಸದಾ ಜೊತೆಗಾರನನ್ನಾಗಿ ಮಾಡಿಕೊಂಡರೆ, ಬಾಪ್ ದಾದಾ ಎಲ್ಲಿ ಜೊತೆಗಿದ್ದಾರೋ ಅಲ್ಲಿ ಮಾಯೆ ದೂರದಿಂದ ಮೂರ್ಛೆಗೊಳ್ಳುವುದು. ಬಾಪ್

ದಾದಾರನ್ನು ಅಲ್ಪ ಸಮಯಕ್ಕಾಗಿ ಜೊತೆಗಾರರನ್ನಾಗಿ ಮಾಡಿಕೊಳ್ಳುತ್ತೀರಿ ಆದ್ದರಿಂದ ಅಷ್ಟೊಂದು ಶಕ್ತಿಯ ಪ್ರಾಪ್ತಿಯಾಗುವುದಿಲ್ಲ. ಸದಾ ಬಾಪ್ ದಾದಾ ಜೊತೆಗಿರಬೇಕು. ಸದಾ ಬಾಪ್ ದಾದಾರೊಂದಿಗೆ ಮಿಲನ ಮಾಡುವುದರಲ್ಲಿ ಮಗ್ನರಾಗಿರಿ ಮತ್ತು ಯಾರು ಮಗ್ನರಾಗಿರುತ್ತಾರೋ ಅವರ ಮನದ ಸೆಳೆತ ಬೇರೆ ಯಾವ ಕಡೆಗೂ ಇರಲಾರದು. ಪ್ರಾರಂಭದಲ್ಲಿ ಮಕ್ಕಳ ಯಾವ ಪ್ರತಿಜ್ಞೆ ತಂದೆಯ ಜೊತೆಗೆ ಆಗಿದೆ? ನಿಮ್ಮೊಂದಿಗೆ ತಿನ್ನುವೆವು, ನಿಮ್ಮೊಂದಿಗೆ ಇರುವೆವು, ನಿಮ್ಮಿಂದಲೇ ಆತ್ಮವನ್ನು ಸಂತೋಷಗೊಳಿಸುವೆವು ಎಂಬ ತಮ್ಮ ಪ್ರತಿಜ್ಞೆಯನ್ನು ಮರೆತುಬಿಡುತ್ತೀರಾ? ಇಡೀ ದಿನಚರಿಯಲ್ಲಿ ಪ್ರತಿಯೊಂದು ಕಾರ್ಯ ತಂದೆಯ ಜೊತೆಗೆ ಮಾಡಿದರೆ ಮಾಯೆ ತೊಂದರೆ ಕೊಡುವುದೇ? ತಂದೆಯ ಜೊತೆಗೆ ಇದ್ದರೆ ಮಾಯೆ ತೊಂದರೆ ಕೊಡುವುದಿಲ್ಲ. ಮಾಯೆಯ ನಾಶವಾಗುವುದು. ತಂದೆಯ ಸ್ನೇಹಿಯಾಗಿರುವಿರಿ ಆದರೆ ಜೊತೆಗಾರನನ್ನಾಗಿ ಮಾಡಿಕೊಂಡಿಲ್ಲ. ಕೈಹಿಡಿದಿದ್ದೀರಿ ಆದರೆ ಜೊತೆ ಮಾಡಿಕೊಂಡಿಲ್ಲ ಆದ್ದರಿಂದ ಮಾಯೆಯಿಂದ ಪೆಟ್ಟು ಬೀಳುತ್ತದೆ. ತಪ್ಪುಗಳಾಗಲು ಕಾರಣ ಎಚ್ಚರಗೆಡಿತನ.

ಆತ್ಮವನ್ನು ನೋಡದೇ ರೂಪದ ಕಡೆಗೆ ಆಕರ್ಷಿತರಾದರೆ ಶವದೊಂದಿಗೆ ಪ್ರೀತಿ ಮಾಡುತ್ತಿದ್ದೀರಿ ಎಂದು ತಿಳಿಯಿರಿ. ಶವದೊಂದಿಗೆ ಪ್ರೀತಿ ಮಾಡುವವರು ನಮ್ಮ ಭವಿಷ್ಯ ಸ್ಮಶಾನದಲ್ಲಿ ಕೆಲಸ ಮಾಡುವುದು ಎಂದು ತಿಳಿದುಕೊಳ್ಳಬೇಕು. ಯಾವ ಸಮಯದಲ್ಲಿ ಈ ಸಂಕಲ್ಪ ಬಂದರೆ ಸ್ಮಶಾನದಲ್ಲಿ ಪಾತ್ರ ಎಂದು ತಿಳಿಯಿರಿ. ಗುರಿ ಉದ್ದೇಶಗಳನ್ನು ಸಮ್ಮುಖದಲ್ಲಿ ಇಟ್ಟುಕೊಳ್ಳಿ ಎಂದು ಎಲ್ಲರಿಗೂ ಹೇಳುತ್ತೀರಲ್ಲವೇ? ಆದ್ದರಿಂದ ಯಾವ ಕಾರ್ಯವನ್ನು ಮಾಡುವಿರೋ, ಯಾವ ಸಂಕಲ್ಪವನ್ನು ಮಾಡುವಿರೋ ಅದಕ್ಕಾಗಿ ಗುರಿ ಮತ್ತು ಪ್ರಾಪ್ತಿಯನ್ನು ಎಂದರೆ ಗುರಿ ಉದ್ದೇಶಗಳನ್ನು ಸಮ್ಮುಖದಲ್ಲಿ ಇಟ್ಟುಕೊಳ್ಳಿ. ಸರ್ವಶಕ್ತಿವಂತ ತಂದೆ ವರದಾತನಿಂದ ತಮ್ಮ ಕಲ್ಪ-ಕಲ್ಪಕ್ಕೂ ಇದೇ ಪಾತ್ರದ ಆಸ್ತಿಯನ್ನು ಪಡೆಯಲು ಬಂದಿರುವಿರಿ. ಸತ್ತವರನ್ನು ಜೀವಂತಗೊಳಿಸುವವರು, ಸ್ಮಶಾನದಲ್ಲಿ ಪಾತ್ರ ನಿಗದಿ ಪಡಿಸಲು ಬಂದಿರುವಿರಾ ಎಂದು ತಮಗೆ ತಾವೇ ಕೇಳಿಕೊಳ್ಳಿ. ಯಾವುದೇ ಮಗು ತನ್ನ ತಪ್ಪನ್ನು ಒಂದು ಬಾರಿ ತಂದೆಯ ಎದುರುಗಡೆ ಇಡುವರೋ ಮತ್ತೆ ಆ ತಪ್ಪನ್ನು ಮಾಡಿದಾಗ ನೂರು ಪ್ರತಿಶತ (100%) ಶಿಕ್ಷೆ ಕ್ರಮನುಸಾರ ಸ್ವತಹವಾಗಿ ಲಭಿಸುತ್ತದೆ. ಅವರು ತಂದೆಯ ಮುಂದೆ ತಮ್ಮ ದುರ್ಬಲತೆಗಳನ್ನು ಇಟ್ಟ ಮೇಲೆ ಇನ್ನೊಮ್ಮೆ ಮಾಡಿದರೆ ಕ್ಷಮೆಯ ಸಾಗರನ ಜೊತೆಗೆ 100 ಪಟ್ಟು ಶಿಕ್ಷೆಯಿಂದ ತಮ್ಮನ್ನು ತಾವು ರಕ್ಷಿಸಿಕೊಟಳ್ಳಲು ಬಾಪ್ ದಾದಾರನ್ನು ಸದಾ ಸಮ್ಮುಖದಲ್ಲಿ ಇಟ್ಟುಕೊಳ್ಳಬೇಕು ಎಂದು ತಿಳಿದುಕೊಳ್ಳಬೇಕು. ಪ್ರತಿ ಹೆಜ್ಜೆ ಬಾಪ್ ದಾದಾರನ್ನು ಅನುಸರಿಸಬೇಕು. ಪ್ರತಿ ಸಂಕಲ್ಪವನ್ನು, ಪ್ರತಿ ಕಾರ್ಯವನ್ನು ಅವ್ಯಕ್ತ ಬಲದಿಂದ, ಅವ್ಯಕ್ತ ರೂಪದಿಂದ ಪರಿಶೀಲನೆ ಮಾಡಿ. ಹೇಗೆ ಸಾಕಾರದಲ್ಲಿ ಜೊತೆಗಿದ್ದರೆ ಪರಿಶೀಲನೆ ಮಾಡಿದ ಮೇಲೆ ಅದನ್ನು ಪ್ರಯೋಗದಲ್ಲಿ ತರುತ್ತೀರಿ. ಅದೇ ರೀತಿ ಬಾಪ್ ದಾದಾರನ್ನು ಅವ್ಯಕ್ತ ರೂಪದಲ್ಲಿ ಸದಾ ಸಮ್ಮುಖದಲ್ಲಿ ಅಥವಾ ಜೊತೆಗೆ ಇಟ್ಟುಕೊಳ್ಳುವುದರಿಂದ ಪ್ರತಿಯೊಂದು ಸಂಕಲ್ಪ ಮತ್ತು ಪ್ರತಿಯೊಂದು ಕರ್ಮವನ್ನು ಪರಿಶೀಲನೆ ಮಾಡಿ ನಂತರ ಮಾಡುವುದರಿಂದ ಯಾವುದೂ ವ್ಯರ್ಥ, ವಿಕರ್ಮವಾಗುವುದಿಲ್ಲ. ಯಾರಿಂದಲಾದರೂ ಯಾವುದೇ ಮಾತನ್ನು ಕೇಳುವಾಗ ಮಾತಿನಹಾಡನ್ನು ಕೇಳದೇ ಅದರ ರಹಸ್ಯವನ್ನು ತಿಳಿಯಿರಿ. ರಹಸ್ಯವನ್ನು ಬಿಟ್ಟು ಅದರ ಆಲಾಪವನ್ನು(ಥಳುಕು) ಕೇಳುವುದರಿಂದ ನಾಜೂಕುತನ ಬರುತ್ತದೆ. ಇವರು ಹೀಗೆ ಹೇಳುತ್ತಾರೆ ಆದ್ದರಿಂದ ಹೀಗಾಗುತ್ತದೆ ಎಂದು ಎಂದಿಗೂ ಹೀಗೆ ಯೋಚಿಸಬೇಡಿ ಆದರೆ ಯಾರು ಮಾಡುತ್ತಾರೋ ಅವರು ಪಡೆಯುತ್ತಾರೆ, ಇದನ್ನು ಸಮ್ಮುಖದಲ್ಲಿ ಇಟ್ಟುಕೊಳ್ಳಿ. ಬೇರೆಯವರ ಸಂಪಾದನೆಯ ಆಧಾರ ಪಡೆಯಬೇಡಿ. ಬೇರೆಯವರ ಸಂಪಾದನೆಯ ಕಡೆಗೆ ನೋಡಬೇಡಿ. ಅದರಿಂದಲೇ ಈರ್ಷೆ ಬರುತ್ತದೆ. ಇದಕ್ಕಾಗಿ ಸದಾ ತಂದೆಯ ಈ ಸ್ಲೋಗನ್ ನೆನಪಿಡಿ. "ತಮಗಿರುವದರ ನಶೆಯಿರಲಿ". ಬೇರೆಯವರ ನಶೆಯನ್ನು ಗುರಿಯಾಗಿಟ್ಟುಕೊಳ್ಳಬೇಡಿ. ಆದರೆ ಬಾಪ್ ದಾದಾರ ಗುಣ ಮತ್ತು ಕರ್ತವ್ಯವನ್ನು ಗುರಿ ಮಾಡಿಕೊಳ್ಳಿ. ಸದಾ ಬಾಪ್ ದಾದಾರ ಕರ್ತವ್ಯದ ಸ್ಮೃತಿ - ಬಾಪ್ ದಾದಾರ ಜೊತೆಗೆ ನಾನು ಸಹ ಅಧರ್ಮದ ವಿನಾಶಕ್ಕಾಗಿ ನಿಮಿತ್ತನಾಗಿದ್ದೇನೆ ಎಂಬುದಿರಲಿ. ಅಂತಹವರು ತಾವೇ ಅಧರ್ಮದ ಕಾರ್ಯ ಅಥವಾ ದೈವೀ ಮರ್ಯಾದೆಯನ್ನು ಖಂಡಿಸುವ ಕಾರ್ಯವನ್ನು ಹೇಗೆ ಮಾಡಲು ಸಾಧ್ಯ? ನಾನು ಮಾಸ್ಟರ್ ಮರ್ಯಾದಾ ಪುರುಷೋತ್ತಮನು ಎಂದಾಗ ಮರ್ಯಾದೆಗಳನ್ನು ಖಂಡಿಸಲು ಸಾಧ್ಯವಿಲ್ಲ. ಇಂತಹ ಸ್ಮೃತಿ ಇಟ್ಟುಕೊಳ್ಳುವುದರಿಂದ ಸಮಾನ ಮತ್ತು ಸಂಪೂರ್ಣ ಸ್ಥಿತಿಯಾಗುವುದು. ತಿಳಿಯಿತೇ? ಕಡಿಮೆ ಯೋಚಿಸಿ, ಅಧಿಕ ಕರ್ತವ್ಯ ಮಾಡಿ.

ಕೇವಲ ಯೋಚಿಸುವುದರಲ್ಲಿ ಸಮಯ ವ್ಯಯಗೊಳಿಸಬೇಡಿ. ಸೃಷ್ಟಿಯ ವಿನಾಶದ ಮೊದಲೇ ದುರ್ಬಲತೆ ಮತ್ತು ಕೊರತೆಯ ಅವನತಿಯನ್ನು ಮಾಡಿ.

ಭಟ್ಟಿ ಮಾಡುವವರು, ಭಟ್ಟಿಯಲ್ಲಿ ತಮ್ಮ ರೂಪ-ರಂಗು ಮತ್ತು ಹೊಳಪನ್ನು ಬದಲಾಯಿಸಿದ್ದೀರಲ್ಲವೇ? ಅನೇಕ ರೂಪ ಬದಲಾಯಿಸುವುದನ್ನು ಅಳಿಸಿದಿರಾ? ಸದಾಕಾಲಕ್ಕಾಗಿ ಆತ್ಮಿಕ ರೂಪ ಕಂಡು ಬರುವಂತೆ ತಮ್ಮನ್ನು ಮಾಡಿಕೊಂಡಿದ್ದೀರಾ? ಗೊಂದಲದ ಹೆಸರೇ ಇಲ್ಲದಿರುವಷ್ಟು ತಮ್ಮನ್ನು ಉಜ್ವಲ ಮಾಡಿಕೊಂಡಿರುವಿರಾ? ಅಲ್ಪಕಾಲಕ್ಕಾಗಿ ಪ್ರತಿಜ್ಞೆ ಮಾಡಿರುವಿರಾ ಅಥವಾ ಅಂತಕಾಲದವರೆಗೆ ಪ್ರತಿಜ್ಞೆ ಮಾಡಿರುವಿರಾ? ಜನ್ಮ ಪರಿವರ್ತನೆಯಾದ ಮೇಲೆ ಹಳೆಯ ಜನ್ಮದ ಮಾತುಗಳು ಮರೆತು ಹೋಗುವಂತೆ ತಮ್ಮ ಹಳೆಯ ಮಾತುಗಳು, ಹಳೆಯ ಸಂಸ್ಕಾರಗಳನ್ನು ಈ ರೀತಿ ಪರಿವರ್ತನೆ ಮಾಡಬೇಕು. ಈ ರೀತಿ ಹಳೆಯ ಸಂಸ್ಕಾರಗಳನ್ನು ಭಸ್ಮ ಮಾಡಿದ್ದೀರಾ ಅಥವಾ ಅಸ್ಥಿಗಳನ್ನು ಇಟ್ಟಿರುವಿರೋ? ಅಸ್ಥಿಗಳಲ್ಲಿ ಮತ್ತೆ ಭೂತದ ಪ್ರವೇಶವಾಗುತ್ತದೆ. ಆದ್ದರಿಂದ ಅಸ್ಥಿಗಳನ್ನು ಸಂಪೂರ್ಣ ಸ್ಥಿತಿಯ ಸಾಗರದಲ್ಲಿ ಸಮಾವೇಶಗೊಳಿಸಿಕೊಂಡು ಹೋಗಿ, ಬಚ್ಚಿಟ್ಟುಕೊಂಡು ಹೋಗಬೇಡಿ, ಇಲ್ಲವಾದರೆ ತಮ್ಮ ಅಸ್ಥಿಗಳು ಸ್ಥಿತಿಯನ್ನು ಉದ್ವಿಗ್ನಗೊಳಿಸುತ್ತವೆ. ಸಂಕಲ್ಪಗಳ ಸಮಾಪ್ತಿ ಮಾಡಬೇಕು.

ಪ್ರತಿಯೊಬ್ಬರೂ ಸಿಂಹಾಸನದ ಮೇಲೆ ಕುಳಿತುಕೊಳ್ಳಲು ಪುರುಷಾರ್ಥ ಮಾಡಬೇಕೇ ಹೊರತು ಸಿಂಹಾಸನದ ಮುಂದೆ ಇರುವಂತಹುದಲ್ಲ. ಈಗ ಸಮೀಪದಲ್ಲಿದ್ದರೆ ಆಗ ಸಿಂಹಾಸನದ ಮೇಲೆ ಕುಳಿತುಕೊಳ್ಳುವಿರಿ. ಯಾರು ಎಷ್ಟು ಸಮೀಪವಿರುವರೋ ಅಷ್ಟು ಸಮಾನತೆಯಲ್ಲಿರುವರು. ನಿಮ್ಮ ಕಣ್ಣುಗಳನ್ನು ಯಾರಾದರೂ ನೋಡಿದರೆ ಅವರಿಗೆ ಮುಕ್ತಿ, ಜೀವನಮುಕ್ತಿಯ ದಾರಿ ಕಂಡು ಬರಬೇಕು. ಈ ರೀತಿಯ ಜಾದೂ ಕಣ್ಣಲ್ಲಿ ಇರಬೇಕು. ಆಗ ತಮ್ಮ ಕಣ್ಣುಗಳು ಎಷ್ಟು ಸೇವೆಯನ್ನು ಮಾಡುವವು ಮತ್ತು ಮಸ್ತಿಷ್ಕವೂ ಸೇವೆ ಮಾಡುವುದು. ಮಸ್ತಿಷ್ಕ ಆತ್ಮರಿಗೆ ಏನನ್ನು ತೋರಿಸುತ್ತದೆ? ತಂದೆಯನ್ನು ತಮ್ಮ ಮಸ್ತಿಷ್ಕದಿಂದ ತಂದೆಯ ಪರಿಚಯವಾಗುವಂತಹ ಸೇವೆಯನ್ನು ಮಾಡಿದಾಗ ಸಮೀಪದ ನಕ್ಷತ್ರವಾಗುವಿರಿ. ಹೇಗೆ ಸಾಕಾರದಲ್ಲಿ ಮಸ್ತಕ ಮತ್ತು ಕಣ್ಣುಗಳು ಸೇವೆ ಮಾಡುವುದನ್ನು ತಂದೆಯಲ್ಲಿ ನೋಡಿದಿರಿ. ಮಸ್ತಿಷ್ಕದಲ್ಲಿ ಜ್ಯೋತಿರ್ಬಿಂದು ಇರುತ್ತಿತ್ತು, ಕಣ್ಣುಗಳಲ್ಲಿ ತೇಜಸ್ಸು ತ್ರಿಮೂರ್ತಿಯ ನೆನಪಿನದು ಇರುತ್ತಿತ್ತು. ಈ ರೀತಿ ಸಮಾನರಾಗಬೇಕು. ಸಮಾನರಾಗುವುದರಿಂದ ಸಮೀಪದವರಾಗುವಿರಿ. ತಾವು ಸ್ವಯಂ ಇಂತಹ ಸ್ಥಿತಿಯಲ್ಲಿರುವಿರಿ ಆಗ ಮಾಯೆ ಏನು ಮಾಡುವುದು, ಮಾಯೆ ಸ್ವಯಂ ನಾಶವಾಗುವುದು. **ಮಕ್ಕಳು ನಿಯಮಿತ (ರೆಗ್ಯುಲರ್) ರಾಗಬೇಕು. ಬಾಪ್ ದಾದಾ ರೆಗ್ಯುಲರ್ ಎಂದು ಯಾರಿಗೆ ಹೇಳುತ್ತಾರೆ? ಬೆಳಗ್ಗೆಯಿಂದ ರಾತ್ರಿಯವರೆಗೆ ಶ್ರೀಮತದಂತೆ ಯಾರು ಕರ್ತವ್ಯವನ್ನು ಮಾಡುತ್ತಾರೋ ಅವರಿಗೆ ರೆಗ್ಯುಲರ್ ಎಂದು ಹೇಳುತ್ತಾರೆ. ಸಂಕಲ್ಪದಲ್ಲಿ, ವಾಣಿಯಲ್ಲಿ, ಕರ್ಮದಲ್ಲಿ, ಚಲನೆಯಲ್ಲಿ, ನಿದ್ರೆಯಲ್ಲಿ ಎಲ್ಲದರಲ್ಲಿ ರೆಗ್ಯುಲರ್, ಯಾರು ಎಷ್ಟು ರೆಗ್ಯುಲರ್ ಆಗಿರುತ್ತಾರೋ ಅಷ್ಟು ಬೇರೆಯವರ ಸೇವೆಯನ್ನು ಸರಿಯಾಗಿ ಮಾಡಬಲ್ಲರು.** ಸೇವಾಧಾರಿ ಎಂದರೆ ಒಂದು ಸಂಕಲ್ಪವೂ ಸೇವೆಯಿಲ್ಲದೆ ಇರುವುದಿಲ್ಲ. ಈ ರೀತಿ ಯಾರಾದರೂ ಪ್ರಮಾಣ ಕೊಡಬಹುದೇ? ಕೇವಲ ಬಾಯಿಂದ ಅಷ್ಟೇ ಅಲ್ಲ ಆದರೆ ಸರ್ವ ಕರ್ಮೇದ್ರಿಯಗಳು ಸೇವೆಯಲ್ಲಿ ತತ್ಪರವಾಗಿರಬೇಕು. ಹೇಗೆ ಬಾಯಿ ವ್ಯಸ್ತವಾಗಿರುತ್ತದೆಯೋ ಹಾಗೆ ಮಸ್ತಿಷ್ಕ, ಕಣ್ಣುಗಳು ಸೇವೆಯಲ್ಲಿ ತತ್ಪರವಾಗಿರಲಿ, ಸರ್ವ ಪ್ರಕಾರದ ಸೇವೆಯನ್ನು ಮಾಡಿ ಸೇವೆಯ ಪ್ರತ್ಯಕ್ಷ ಪ್ರಮಾಣ ಕೊಡಬೇಕು. ಒಂದು ಪ್ರಕಾರದಿಂದ ಸೇವೆಯ ಪ್ರಮಾಣ ಸಿಗುವುದಿಲ್ಲ ಕೇವಲ ವರ್ಣನೆ ಮಾಡುತ್ತಾರೆ. ಆದರೆ ಪ್ರಮಾಣ ಬೇಕು. ಆದ್ದರಿಂದ ಪ್ರಮಾಣವನ್ನು ಕೊಡಲು ಸರ್ವ ಪ್ರಕಾರದ ಸೇವೆಯಲ್ಲಿ ಸದಾ ತತ್ಪರರಾಗಿರಬೇಕು. ಎಷ್ಟು ಸೇವಾಧಾರಿ ಆಗುವಿರಿ ಅಷ್ಟು ತನ್ನ ಸಮಾನ ಮಾಡಿಕೊಳ್ಳುವರು ನಂತರ ತಂದೆಯ ಸಮಾನ ಮಾಡುವರು.

ಅವ್ಯಕ್ತ ಮುರಳಿ 23-10-1970.

*ಮಹಾರಥಿಯಾಗುವ ಪುರುಷಾರ್ಥ*

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಿ ಧಾರಣೆಯಲ್ಲಿ ತರಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ನನ್ನ ಸ್ಥಿತಿಯನ್ನು ಹೇಗೆ ಬೇಕೆಂದರೆ ಹಾಗೆ ಮತ್ತು ಯಾವಾಗಬೇಕಾದರೆ ಆಗ ಸ್ಥಿತ ಮಾಡಬಲ್ಲ ಆತ್ಮಿಕ ವ್ಯಾಯಾಮವನ್ನು ಮಾಡಿದ್ದೇನೆ.

2. ನಾನು ತಂದೆಯನ್ನು ಸಾಥಿ (ಜೊತೆಗಾರ) ಮತ್ತು ಸಾರಥಿಯಾಗಿ ಮಾಡಿಕೊಂಡಿರುವ ಮಹಾರಥಿಯಾಗಿದ್ದೇನೆ.

3.ನಾನು ದಿನವಿಡೀ ಪ್ರತೀ ಕಾರ್ಯದಲ್ಲಿ ತಂದೆಯನ್ನು ಜೊತೆಗಾರನನ್ನಾಗಿ ಮಾಡಿಕೊಂಡು ಮಾಯೆಯಿಂದ ಮುಕ್ತಿಯನ್ನು ಪಡೆದಿದ್ದೇನೆ.

4. ನಾನು ಯಾವ ಕಾರ್ಯ ಮಾಡುತ್ತಿದ್ದರೂ, ಯಾವ ಸಂಕಲ್ಪವನ್ನು ಮಾಡುತ್ತಿದ್ದರೂ, ಗುರಿ ಮತ್ತು ಪ್ರಾಪ್ತಿಯನ್ನು ಎದುರಿಗಿಟ್ಟುಕೊಂಡು ಆಸ್ತಿಗೆ (ವಾರಸತ್ವಕ್ಕೆ) ಅಧಿಕಾರಿಯಾಗಿದ್ದೇನೆ.

5. ನಾನು ಯಾವ ವಿಷಯವನ್ನು ಕೇಳಿದರೂ ಆ ವಿಷಯದ ಥಳುಕಿಗೆ ಹೋಗದೆ ಅದರ ರಹಸ್ಯವನ್ನು ತೆಗೆದುಕೊಂಡಿದ್ದೇನೆ.

6. ನಾನು "ತಮಗಿರುವುದರ ನಶೆ ಇರಲಿ" ಎಂಬ ಸ್ಲೋಗನ್ ಅನ್ನು ಸದಾ ನೆನಪಿಟ್ಟಿದ್ದೇನೆ.

7. ನಾನು ತಂದೆಯೊಂದಿಗೆ ಅಧರ್ಮದ ವಿನಾಶ ಮತ್ತು ಸತ್ಯಧರ್ಮ ಸ್ಥಾಪನೆಯ ಕರ್ತವ್ಯದಲ್ಲಿ ತೊಡಗಿರುವ ಮಾಸ್ಟರ್ ಮರ್ಯಾದಾ ಪುರುಷೋತ್ತಮನು.

8. ನನ್ನ ನಯನಗಳಿಂದ ಎಲ್ಲರಿಗೂ ಮುಕ್ತಿ, ಜೀವನ್ ಮುಕ್ತಿಯ ದಾರಿ ಕಂಡು ಬಂದಿದೆ.

9. ನನ್ನ ಮಸ್ತಕದಲ್ಲಿ ಜ್ಯೋತಿರ್ಬಿಂದು ಮತ್ತು ನಯನಗಳಲ್ಲಿ ತ್ರಿಮೂರ್ತಿ ಸ್ಮೃತಿಯ ತೇಜಸ್ಸು ಕಾಣಿಸುವ ಬಾಪ್ ಸಮಾನ ಸ್ವರೂಪ.

10. ನನ್ನ ಸಂಕಲ್ಪದಲ್ಲಿ, ವಾಣಿಯಲ್ಲಿ, ಕರ್ಮದಲ್ಲಿ, ನಡವಳಿಕೆಯಲ್ಲಿ, ನಿದ್ರೆಯಲ್ಲಿ ಅರ್ಥಾತ್ ಎಲ್ಲದರಲ್ಲಿಯೂ ಶ್ರೀಮತದ ಅನುಸಾರವಾಗಿರುವ ರೆಗ್ಯುಲರ್ ವಿದ್ಯಾರ್ಥಿಯಾಗಿದ್ದೇನೆ.

11. ನಾನು ಸರ್ವ ಪ್ರಕಾರದ ಸೇವೆಯನ್ನು ಮಾಡಿ ತಂದೆಯ ಪ್ರತ್ಯಕ್ಷತೆಯಿಂದ ಇತರರನ್ನು ತಂದೆಯ ಸಮಾನವಾಗಿ ತಯಾರು ಮಾಡಿದ್ದೇನೆ.